ಮೇಲೆ ಹಾಸಿದ ಸಿಂಗಲ್ ಗಾದಿಯ ಮೇಲೆ ಅವರು ಮಲಗುತ್ತಿದ್ದರು. ಪಕ್ಕದಲ್ಲಿ ಅವರ ಉದ್ದದಷ್ಟು ಐದಾರು ಸಾಲು ಪುಸ್ತಕಗಳ ರಾಶಿ ಇರುತ್ತಿತ್ತು. ಆ ರಾಶಿ ಒಂದು ಮಿನಿ ಗ್ರಂಥಾಲಯದಂತೆ ತೋರುತ್ತಿತ್ತು. ಅಲ್ಲಿ ಶೇಕ್ಸ್ಪಿಯರ್, ರಸ್ಕಿನ್, ವೂಲ್ಫ್, ಝೋಲಾ, ಕಮು, ಕಾಫ್ಕಾ, ಮಾರ್ಕ್ವೆಜ್, ಟಾಲ್‌ಸ್ಟಾಯ್, ಟ್ಯಾಗೋರ್, ಮಧುರಚೆನ್ನ, ಬೇಂದ್ರೆ, ಲಂಕೇಶ್, ಕಂಬಾರ, ಅಡಿಗ, ಚಿತ್ತಾಲ, ಕಾರ್ನಾಡ, ಚಂಪಾ ಮುಂತಾದವರ ಪುಸ್ತಕಗಳಿರುತ್ತಿದ್ದವು. ಪುಸ್ತಕಗಳೆಂದರೆ ಕೇವಲ ಪಠ್ಯಪುಸ್ತಕಗಳು ಎಂದು ನಂಬಿದ್ದ ನನಗೆ, ಹೀಗೆ ಓದುವ ಪುಸ್ತಕಗಳೂ ಇರುತ್ತವೆ ಎಂದು ಅರ್ಥವಾದದ್ದು ಅವರ ಮಗ್ಗಲು ಬಿದ್ದಿರುತ್ತಿದ್ದ ಆ ಪುಸ್ತಕಗಳ ರಾಶಿಯನ್ನು ನೋಡಿದಾಗಲೆ.

ಆಗಿನ ಸಂದರ್ಭದಲ್ಲಿ ಪಿ. ಲಂಕೇಶರ ನಾಟಕಗಳು ಅವರನ್ನು ಬಹುವಾಗಿ ಆಕರ್ಷಿಸಿದ್ದವು. ನಮ್ಮ ಕಾಲೇಜ್ ಗ್ಯಾದರಿಂಗ್‌ಗೆ ಲಂಕೇಶರ 'ಗಿಳಿಯು ಪಂಜರದೊಳಿಲ್ಲ' ನಾಟಕವನ್ನು ನಿರ್ದೇಶಿಸಿ ವಿದ್ಯಾರ್ಥಿಗಳಿಂದ ಅದರ ರಂಗಪ್ರಯೋಗ ಮಾಡಿಸಿದ್ದರು. ಮತ್ತೊಂದು ಸಾರಿ ಚಂಪಾ ಅವರ 'ಟಿಂಗರ ಬುಡ್ಡಣ್ಣ' ನಾಟಕವನ್ನೂ ಆಡಿಸಿದ್ದರು. ಈ ಎರಡೂ ನಾಟಕಗಳನ್ನು ರಂಗಪ್ರಯೋಗಕ್ಕೆ ಅಳವಡಿಸುವಾಗ

